ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ
ನ್ಯಾಯಾಲಯ,ಯಾದಗಿರಿ.

**Crl. Misc No. 1072 /2021**
**PW : 1**

ದಿನಾಂಕಃ **17-12-2025** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ಲಕ್ಷ್ಮೀ |
| ತಂದೆ/ಗಂಡನ ಹೆಸರುಃ | ವೆಂಕಟಪ್ಪ |
| ವಯಸ್ಸುಃ | **35** ವರ್ಷ |
| ಉದ್ಯೋಗಃ | ಮನೆಕೆಲಸ |
| ವಾಸ ಸ್ಥಳಃ | ಬುರುಪಲ್ಲಿ |

<u>ಮುಖ್ಯ ವಿಚಾರಣೆ ಅರ್ಜಿದಾರ ಪರವಾಗಿಃ ಶ್ರೀ ಎಮ್. ಎಮ್. ಜಿ. ವಕೀಲರಿಂದಃ</u>

1. ಎದುರುದಾರನು ನನ್ನ ಗಂಡ. ನನ್ನ ಮತ್ತು ಎದುರದಾರನ ಮದುವೆ 17 ವರ್ಷದ ಹಿಂದೆ ಅಜಲಾಪೂರ ಗ್ರಾಮದಲ್ಲಿ ನನ್ನ ಗಂಡನ ಮನೆಯ ಮುಂದೆ ಆಗಿರುತ್ತದೆ. ಸದರಿ ಮದುವೆಯಲ್ಲಿ ಎದುರುದಾರನಿಗೆ 3 ತೊಲೆ ಬಂಗಾರ, 50,000/- ರೂ. ಹಣ ಮತ್ತು ಗೃಹ ಬಳಕೆ ವಸ್ತುಗಳು, ಒಂದು ಹಸುವನ್ನು ನೀಡಿರುತ್ತೇವೆ. ಸದರಿ ಮದುವೆಯ ಫಲವಾಗಿ ಅರ್ಜಿದಾರ ನಂಬರ 2 ಮತ್ತು 3 ರವರು ಜನಿಸಿರುತ್ತಾರೆ. ಸದರಿ ಮಕ್ಕಳು ಹುಟ್ಟಿದ ನಂತರ ಎದುರುದಾರನು ಕಿರುಕುಳ ನೀಡಲು ಪ್ರಾರಂಭಿಸಿರುತ್ತಾನೆ. ಎದುರುದಾರನು ಹಣ ತೆಗೆದುಕೊಂಡು ಬಾ ಎಂದು ನನಗೆ ಕಿರುಕುಳ ನೀಡಿರುತ್ತಾರೆ. ಹಿರಿಯರ ಮುಂದೆ ನ್ಯಾಯ ಪಂಚಾಯತಿ ಮಾಡಿದರೂ ಕೂಡ ಎದುರುದಾರನು ಕೇಳಿರುವುದಿಲ್ಲ. ಸದರಿ ಪಂಚಾಯತಿ ಆದರೂ ಕೂಡ ಎದುರುದಾರನು ಕಿರುಕುಳ ನೀಡಿರುತ್ತಾನೆ. ಎದುರುದಾರನು ಕೃಷಿ ಮತ್ತು ಕೂಲಿ ಕೆಲಸ ಮಾಡುತ್ತಾನೆ. ಕೃಷಿಯಿಂದ ವಾರ್ಷಿಕ 3 ಲಕ್ಷ ರೂ. ಆದಾಯ ಮತ್ತು ತರಕಾರಿ ಅಂಗಡಿಯಿಂದ ಪ್ರತಿ ದಿನಕ್ಕೆ 5 ರಿಂದ 6 ಸಾವಿರ ರೂ. ಗಳಿಸುತ್ತಾನೆ. ಸದರಿ ಎದುರುದಾರನ ಹೆಸರಿನಲ್ಲಿ ಜಮೀನು ಮತ್ತು ಮನೆ ಇರುತ್ತದೆ. ಸದರಿ ಪಹಣಿಗಳನ್ನು ನಿಪಿ-1 ರಿಂದ ನಿಪಿ-3 ಮತ್ತು ಖಾತಾ ನಕಲನ್ನು ನಿಪಿ-4 ಎಂದು ಗುರುತಿಸಲಾಯಿತು. ಸದರಿ ಎದುರುದಾರನು ಬೇರೆ ಮದುವೆ ಅಂಜಮ್ಮ ಜೊತೆ ಮಾಡಿಕೊಂಡಿರುತ್ತಾನೆ ಆದ್ದರಿಂದ ನನ್ನನ್ನು ನೋಡಿಕೊಳ್ಳಲು

ನಿರ್ಲಕ್ಷ ಮಾಡಿರುತ್ತಾನೆ. ಸದರಿ ಎದುರುದಾರನಿಗೆ ಸಾಕಷ್ಟು ಅದಾಯ ಇದ್ದರೂ ಕೂಡ ನನ್ನನ್ನು ನೋಡಿಕೊಳ್ಳಲು ನಿರ್ಲಕ್ಷ ಮಾಡಿರುತ್ತಾನೆ. ನನಗೆ ಮತ್ತು ನನ್ನ ಮಕ್ಕಳಿಗೆ ಪ್ರತಿ ತಿಂಗಳಿಗೆ 30 ರಿಂದ 40 ಸಾವಿರ ರೂ. ಜೀವನಾಂಶದ ಅವಶ್ಯಕತೆ ಇರುತ್ತದೆ. ಎದುರದಾರನು ಜೀವನಾಂಶ ನೀಡುವ ಭಾದ್ಯತೆ ಇರುತ್ತದೆ. ನನಗೆ ಕೆಲಸ ಮಾಡಲು ಆಗುವುದಿಲ್ಲ ಆದ್ದರಿಂದ ಎದುರುದಾರನು ಜೀವನಾಂಶ ನೀಡುವ ಅವಶ್ಯಕತೆ ಇರುತ್ತದೆ. ನನ್ನ ಮಗಳಿಗೆ ಆರೋಗ್ಯ ಸರಿ ಇರುವುದಿಲ್ಲ ಆದ್ದರಿಂದ ಆಸ್ಪತ್ರೆಗೆ ಖರ್ಚು ವೆಚ್ಚದ ಅವಶ್ಯಕತೆ ಇರುತ್ತದೆ.

<u>ಅರ್ಜಿದಾರ ಪರ ವಕೀಲರು ಮುಂದದುವರೆದ ಮುಖ್ಯ ವಿಚಾರಣೆಗೆ ಸಮಯಾಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.</u>

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ